ಮಾಡಿದ್ದೇವೆ, ಮಾನ್‌ಸೂನ್ ಹೊತ್ತಿಗೆ ಅಲ್ಲಿ ಸ್ಪೋರೇಜ್ ಮಾಡುವುದಕ್ಕೆ ಆನ್ ಫ್ರೋಗ್ರಾಮ್ ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ. ಒಂದು ದಿನವನ್ನೂ ಕೂಡ ವ್ಯರ್ಥ ಮಾಡಿಲ್ಲ. ಗ್ಯಾಮನ್ ಆಫ್ ಇಂಡಿಯಾದವರು ಮತ್ತು ನಮ್ಮ ಇಂಜಿನೀಯರ್ಸ್‌ಗಳು ಸತತವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಬಿಸಿಲು ಇರುವುದರಿಂದ ದಿವಸದಲ್ಲಿ ಕಾಂಕ್ರೀಟ್ ಹಾಕಲು ಆಗುವುದಿಲ್ಲ. ಹಾಗಾಗಿ ರಾತ್ರಿಯಲ್ಲಿ ಕಾಂಕ್ರೀಟ್ ಹಾಕಿ ಸ್ಟ್ರೆಂಗ್ತ್ ಮತ್ತು ಹಾರ್ಡ್‌ನೆಸ್ ಬರಲಿ ಎಂದು ಹಾಕುತ್ತಿದ್ದಾರೆ. ಹಾಗಾಗಿ ಡ್ಯಾಂಪೋರ್ಷನ್ ಕೆಲಸ ನಿಂತಿಲ್ಲ. ನಾನು ನಿನ್ನೆ ಬೆಳಿಗ್ಗೆ ಅಲ್ಲಿಂದ ಬಂದಿದ್ದೇನೆ. Coming back to three main canals, one is J.B.C and that the next is M.R.B.C and third is Indi Canal.

ಇಷ್ಟೂ ಕೆನಾಲ್‌ಗಳಲ್ಲಿ400 ಕ್ಕಿಂತಲೂ ಹೆಚ್ಚು ಕಿ.ಮೀ.ಗಳಲ್ಲಿ 80 ಕಿ.ಮೀ ಮಾತ್ರ ಅರ್ಥ್‌ವರ್ಕ್ ಇರುವುದು. ಅದಕ್ಕಾಗಿ ಮೊದಲು ಜೀರೋ ದಿಂದ 40ರ ವರೆಗೆ ಡಿಸ್ಟ್ರಿಬ್ಯೂಟರಿ ಮಾಡಬೇಕು. ಡಿಸ್ಟ್ರಿಬ್ಯೂಟರಿ ಆದ ಮೇಲೆ ಫೀಲ್ಡ್ ಕ್ಯಾನಾಲ್ ಮಾಡಬೇಕು. ಒಟ್ಟಿನಲ್ಲಿ ಇಲ್ಲಿ ಆಗಿರತಕ್ಕಂಥ ಒಂದೇ ಒಂದು ತಾಪತ್ರಯ ಅಂದರೆ, ಎನ್‌ಆರ್‌ವಿಸಿ ಯಲ್ಲಿ ಈ ಒಂದು ವ್ಯಾಜ್ಯ ಬಂದಾಗ, ತಕರಾರುಗಳು, ಸಮಿತಿಗಳು ಮುಂತಾಗಿ ಆರೋಪಗಳನ್ನು ಮಾಡಿದಾಗ ನಾವು ಒಂದೂವರೆ ವರ್ಷದಿಂದ ಮೂರು ಕಮಿಟಿಗಳ ಕಡೆಯಿಂದ ತನಿಖೆ ಮಾಡಿಸಿದ್ದೇವೆ. ಮಾನ್ಯ ಕೆ.ಸಿ. ರೆಡ್ಡಿಯವರು ಹೋಗಿ ಬಂದು ತನಿಖೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಎರಡನೇ ಕಮಿಟಿಯಲ್ಲಿ ನಮ್ಮ ಉಮೇಶ್ ರಾವ್‌ರವರು ಇದ್ದಾರೆ. ಮೂರನೇ ಕಮಿಟಿಯಲ್ಲಿ ನಮ್ಮ ಅಡಿಶನಲ್ ಸೆಕ್ರೆಟರಿ ಮುತ್ತಣ್ಣನವರನ್ನು ಕಳುಹಿಸಿ ತನಿಖೆ ಮಾಡಿಸಿದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮದ ಬೋರ್ಡ್‌ನಲ್ಲಿ ವರದಿಗಳನ್ನು ಇಟ್ಟು ಪೂರ್ಣವಾಗಿ ಪರಿಶೀಲನೆ ಮಾಡಿಸಿದ್ದೇವೆ. ಸಚಿವಸಂಪುಟದಲ್ಲಿ ಕೂಡ ಈ ಕುರಿತು ತೀರ್ಮಾನ ಮಾಡಿದ್ದೇವೆ. ಇನ್ನು 15 ದಿವಸಗಳಲ್ಲಿ ಅಲ್ಲಿರತಕ್ಕಂಥ ಎಲ್ಲಾ ಕಂಟ್ರಾಕ್ಟರ್ಸ್‌ಗೆ ಏನು ತೀರ್ಮಾನವಾಗಿದೆ, ಅದರಂತೆ ನಾವು ಪೇಮೆಂಟ್ ಮಾಡುತ್ತೇವೆ. ಅಂತೆಯೇ ಅಲ್ಲಿ ಯಾವ ತನಿಖೆಯ ಅವಶ್ಯವೂ ಇಲ್ಲ. ಕೆಲಸ ಮಾಡುತ್ತಿರುವುದಕ್ಕೆ ನಾವು ತನಿಖೆ ಮಾಡಿಸಬೇಕೇ? 2000 ಕೋಟಿ ಕೆಲಸವನ್ನು ಮೂರು ವರ್ಷಗಳಲ್ಲಿ ಮಾಡುವುದಕ್ಕೆ ನಾವು ತನಿಖೆ ಮಾಡಬೇಕಾ? ಆದ್ದರಿಂದ ತನಿಖೆ ಅವಶ್ಯಕತೆ ಇಲ್ಲ, ಕೆಲಸ ಶುರು ಮಾಡಿಸುತ್ತೇವೆ. ಪೇಮೆಂಟೂ ಕೊಡುತ್ತೇವೆ.

ಬಿಜಾಪುರಕ್ಕೆ ಕುಡಿಯುವ ನೀರಿನ ತೊಂದರೆ

ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಅಧ್ಯಕ್ಷರೇ, ಬಿಜಾಪುರಕ್ಕೆ ಇನ್ನೊಂದು ವಾರದಲ್ಲಿ ಕೊಯ್ನಾ ನೀರು ಬಿಡುಗಡೆ ಆಗದಿದ್ದರೆ ಇರುವ ನೀರು ಎರಡುಮೂರು ದಿವಸದಲ್ಲಿ ಆಗಿಹೋಗುವಂತಹ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುಶಃ ಕೃಷ್ಣ ನದಿಯಲ್ಲಿ ನೀರಿಲ್ಲ, ಅದರ ವ್ಯಾಪ್ತಿಗೆ ಬರುವ ಪಟ್ಟಣ ಹಳ್ಳಿಗಳಿಗೂ ನೀರಿಲ್ಲ, ಕನಿಷ್ಟ ಎರಡು ಟಿಎಂಸಿ ಆದರೂ ಬಿಡಬೇಕು ಆದರೆ ನಮ್ಮ ಸರ್ಕಾರ ಈ ಸಂಬಂಧ ಕೋಟ್ಯಾಂತರ ರೂಗಳನ್ನು ಮಹಾರಾಷ್ಟ್ರಕ್ಕೆ ಕೊಡದಿರುವುದರಿಂದ ನೀರು ಬಿಡುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನೀರಾವರಿ ಸಚಿವರಲ್ಲಿ

ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಎರಡು ದಿವಸದಲ್ಲಿ ನೀವು ನೀರು ಬಿಡಿಸದೇ ಇದ್ದರೆ ಬಿಜಾಪುರದ ಕುಡಿಯುವ ನೀರಿನ ಸಮಸ್ಯೆ ಅತ್ಯಂತ ಭೀಕರವಾಗುತ್ತದೆ. ಒಂದು ತಿಂಗಳಿಗಿಂತಲೂ ಹೆಚ್ಚು ನೀರು ಕೊಡದಿರುವ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಗುತ್ತನಾಳ ಕೆರೆಯಲ್ಲಿ ನೀರು ಸಂಪೂರ್ಣ ಬತ್ತಿಹೋಗಿದೆ ಸರ್ಕಾರ ದಯವಿಟ್ಟು ಇವತ್ತೇ ಮಹಾರಾಷ್ಟ್ರ ಸರ್ಕಾರಕ್ಕೆ ಬಾಕಿ ಹಣ ತುಂಬಬೇಕು, ನೀರು ಬಿಡುಗಡೆಗೆ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು. ಇದೇ ಸದನದಲ್ಲಿ ನಮ್ಮ ಮುಖ್ಯಮಂತ್ರಿಗಳೂ ಮಾತು ಕೊಟ್ಟಿದ್ದಾರೆ, ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ನೀರು ಬಿಡಿಸುವ ವ್ಯವಸ್ಥೆ ಮಾಡುತ್ತೇನೆಂದು. ಆದರೆ ಇದುವರೆಗೆ ಕಾರ್ಯಾಚರಣೆ ಆಗಿಲ್ಲ. ಆದ್ದರಿಂದ ಸರ್ಕಾರ ತುರ್ತು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ತಿಮ್ಮಣ್ಣಗೌಡ ಪಾಟೀಲ್ (ಬೀಳಗಿ) : ಸಾರ್, ಕೋಲಾರ ಗಲಗಲಿ ಚಿಕ್ಕಪಡಸಲಗಿ ಮೂರೂ ಬ್ಯಾರೇಜುಗಳು ಈ ವ್ಯಾಪ್ತಿಯಲ್ಲಿ ಬರುತ್ತಿವೆ, ಇನ್ನೆರಡು ದಿವಸದ ನಂತರ ಕುಡಿಯುವ ನೀರೇ ಇಲ್ಲ ಇನ್ನೆರಡು ದಿವಸದಲ್ಲಿ ನೀರು ಬಿಡದೇಹೋದರೆ ರೈತರಿಗೆ ಕೋಟ್ಯಾಂತರ ಹಣ ಹಾನಿಯಾಗುವುದರ ಜೊತೆಗೆ ಬಿಜಾಪುರ, ಜಮಖಂಡಿ ಪಟ್ಟಣಗಳಿಗೂ ಕುಡಿಯುವ ನೀರಿನ ತೊಂದರೆಯಾಗುತ್ತಿದೆ. ಕೊಯ್ನಾ ಜಲಾಶಯದಿಂದಾಗಲಿ ಅಥವಾ ಕಾಳಂಬವಾಡಿ ಬ್ಯಾರೇಜ್ ಮೂಲಕ ನೀರು ಬಿಡದೇ ಹೋದರೆ, ಉಗ್ರ ಪ್ರತಿಭಟನೆಯನ್ನು ಜನರಿಂದ ನಾವು ಎದುರಿಸಬೇಕಾಗುತ್ತದೆ.

ಶ್ರೀ ಕಲೂತಿ ರಾಮಪ್ಪ ಮೇಳಪ್ಪ (ಜಮಖಂಡಿ) : ಅಧ್ಯಕ್ಷರೇ, ಕೃಷ್ಣ ನದಿಯಲ್ಲಿ ನೀರು ಸಂಪೂರ್ಣ ಬತ್ತಿಹೋಗಿರುವುದರಿಂದ ಒಂದೂವರೆ ತಿಂಗಳಿನಿಂದ ಜಮಖಂಡಿ ಪಟ್ಟಣ ಮತ್ತು ಅಕ್ಕಪಕ್ಕದ 40-50 ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆ ಬಹಳ ಆಗಿದೆ. ಬಿಜಾಪುರ ಮತ್ತು ಬಾಗಲಕೋಟೆ ಡಿಸಿಗಳು ಸರ್ಕಾರಕ್ಕೆ ಒಂದು ವರದಿ ಸಲ್ಲಿಸಿ, ಕೃಷ್ಣ ನದಿ ಬತ್ತಿಹೋಗಿರುವುದರಿಂದ ಜನಕ್ಕೆ ದನಕರುಗಳಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಕೊಯ್ನಾ ಡ್ಯಾಮಿನಿಂದ ನೀರು ಬಿಡಿಸುವ ವ್ಯವಸ್ಥೆ ಸರ್ಕಾರ ಮಾಡಬೇಕೆಂದು ತಿಳಿಸಿದ್ದಾರೆ. ಆ ಭಾಗದ ಎಲ್ಲಾ ಶಾಸಕರೂ ನೀರಾವರಿ ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಅನೇಕ ಸಾರಿ ನಾವು ಹೇಳಿದ್ದೇವೆ. ನೀರು ಬಿಡುತ್ತೇವೆ ಎಂಬ ಆಶ್ವಾಸನೆ ನೀಡಿದ್ದರೂ ಏನೂ ವ್ಯವಸ್ಥೆ ಆಗಿಲ್ಲ. ಇದರಿಂದ ಕುಡಿಯುವ ನೀರಿಗೂ ತೊಂದರೆ ಮತ್ತು ಕೋಟ್ಯಾಂತರ ರೂ ಬೆಳೆಗೂ ನಾಶವಾಗುವ ಸ್ಥಿತಿ ಇದೆ, ಆದ್ದರಿಂದ ಸರ್ಕಾರ ಒಂದೆರಡು ದಿವಸದಲ್ಲಿ ನೀರು ಬಿಟ್ಟು ಸಮಸ್ಯೆ ನಿವಾರಣೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಅಧ್ಯಕ್ಷರೇ, ಕಾಳಂಬವಾಡಿ ಜಲಾಶಯದಿಂದ 3 ಟಿಎಂಸಿ ನೀರು ಬಿಡಬೇಕೆಂದು ಸರ್ಕಾರ ಕೇಳಿದೆ, 50 ಲಕ್ಷ ರೂ. ಹಣವನ್ನೂ ಕಟ್ಟಿದ್ದೇವೆ. ಆದರೆ ಅವರು 0.58 ಮಾತ್ರ ಮಹಾರಾಷ್ಟ್ರದವರು ಬಿಟ್ಟಿದ್ದಾರೆ. ಕೊಯ್ನಾ ಜಲಾಶಯದಿಂದ 0.7 ಟಿಎಂಸಿ ನೀರು ಬಿಡಬೇಕೆಂದು ಕೇಳಿದ್ದೇವೆ. ಇನ್ನೂ ಅವರು ಬಿಟ್ಟಿಲ್ಲ. ನಾವು ದುಡ್ಡು ಕಟ್ಟಿದ್ದೇವೆ. ಇವತ್ತೇ ನಾನು ನಮ್ಮ ಮುಖ್ಯಮಂತ್ರಿಗಳಿಂದ ಕಾಗದ ಬರೆಯಿಸುತ್ತೇನೆ, ನಮ್ಮ ಚೀಫ್ ಸೆಕ್ರೆಟರಿ ಅವರ ಚೀಫ್ ಸೆಕ್ರೆಟರಿ ಮಾತನಾಡುವ ಹಾಗೆ ಮಾಡುತ್ತೇನೆ. ನೀರು ಬಿಡಲು ಮಹಾರಾಷ್ಟ್ರ ಸರ್ಕಾರಕ್ಕೆ ನಾವು

ಒತ್ತಾಯ ಮಾಡುತ್ತೇವೆ. ಬಸವನಗೌಡ ಪಾಟೀಲರು ಕುಡಿಯುವ ನೀರಿನ ಬಗ್ಗೆ ಹೇಳಿದರು. ನಿನ್ನೆ ನಾನು ಹುಬ್ಬಳ್ಳಿಯಲ್ಲಿ ಸಭೆ ನಡೆಸಿ ಉಗಾರ ಬ್ಯಾರೇಜಿನಿಂದ 80 ಕಿಮೀ ಹೋಗುವ ಒಂದು ಕೆನಾಲಿದೆ. ಅದರಲ್ಲಿ ನೂರು ಕ್ಯೂಸೆಕ್ಸ್ ನೀರನ್ನು ಬಿಜಾಪುರ ಜಿಲ್ಲೆಗೆ ಕೊಡಬೇಕೆಂದು ಘಟಪ್ರಭಾದ ಚೀಫ್ ಇಂಜಿನಿಯರ್‌ಗೆ ಹೇಳಿದ್ದೇನೆ. ಈಗ ನನಗೆ ಮೆಸೇಜ್ ಬಂತು, ರಾತ್ರೀನೇ ನೀರು ಬಿಟ್ಟಿದ್ದಾರೆ, 100 ಕ್ಯೂಸೆಕ್ಸ್ ನೀರು ಬರಲು ಎರಡು ಮೂರು ದಿವಸ ಬೇಕಾಗುತ್ತದೆ. ಬಿಜಾಪುರಕ್ಕೆ ಕುಡಿಯುವ ನೀರಿಗೆ ತಾಪತ್ರಯವಿಲ್ಲ. ಅಳಂಬವಾಡಿ, ದೂದಗಂಗಾ ಕೊಯ್ನಾಗಳಿಗೆಂದು ನಾವೇನು ಹಣ ಕೊಟ್ಟಿದ್ದೇವೆ ಆದರೂ ನೀರು ಏಕೆ ಬಿಡಲಿಲ್ಲವೆಂದು ಮುಖ್ಯಮಂತ್ರಿಗಳಿಂದಲೇ ಮಾತನಾಡಿಸುತ್ತೇನೆ. ಕೂಡಲೇ ತುರ್ತು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವನಗೌಡ ರಾ. ಪಾಟೀಲ್ : ಕೊಯ್ನ ನೀರು ಬಿಡದೇ ಹೋದರೆ ಉಗಾರದ ಸುತ್ತ ಮುತ್ತ ಇರುವ ರೈತರು ಯಾವುದೇ ಪರಿಸ್ಥಿತಿಯಲ್ಲಿ ಗೇಟ್ ತೆಗೆಯಲು ಅವಕಾಶ ಕೊಡುವುದಿಲ್ಲ. ನಮ್ಮ ಸರ್ಕಾರವೇನೋ ಹಣ ತುಂಬಿದೆ ಎಂದು ಹೇಳುತ್ತದೆ, ಆದರೆ ಬಿಜಾಪುರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೂನಾದಲ್ಲಿರುವ ಚೀಫ್ ಇಂಜಿನಿಯರ್ ಜೊತೆ ಮಾತನಾಡಿದಾಗ ಕರ್ನಾಟಕ ಸರ್ಕಾರದಿಂದ ಇನ್ನೂ ನಮಗೆ ಹಣ ಬಂದಿಲ್ಲ ನಾವು ನೀರು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಂತ್ರಿಗಳು ಏನು ಉತ್ತರ ಹೇಳಿದರು ಎಂದು ಕೇಳಿಸಿಕೊಳ್ಳುವ ಸೌಜನ್ಯ ಇಲ್ಲವೇ ನಿಮಗೆ? ಇನ್ನೆರಡು ಗಂಟೆಯೊಳಗೆ ಅಲ್ಲಿನ ಯಾರಿಗೆ ಬೇಕಾದರೂ ಮಾತನಾಡಿಸಿ ನೀರು ಬಿಡಿಸುವ ಕ್ರಮ ತೆಗೆದುಕೊಳ್ಳುತ್ತೇನೆಂದರೂ ಮತ್ತೆ ಮತ್ತೆ ಮಾತನಾಡುತ್ತೀರಲ್ಲಾ. ನಿಮಗೆ ಭಾಷೆ ಅರ್ಥವಾಗುವುದಿಲ್ಲ ಕುಳಿತುಕೊಳ್ಳಿ ನಾವೇನೂ ಮಾಡುವುದಕ್ಕಾಗುವುದಿಲ್ಲ.

ದ. ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಕ್ಷೇತ್ರದ ನರಸಿಂಹ ದೇವರಿಗೂ ಸಂಪ್ರದಾಯಿಕ ಉತ್ಸವ

ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶ್ರೀ ಸುಬ್ರಹ್ಮಣ್ಯದಲ್ಲಿ ಸುಬ್ರಹ್ಮಣ್ಯ ದೇವರ ಮತ್ತು ಸ್ಥಳೀಯ ಮಠದ ನರಸಿಂಹ ದೇವರ ಉತ್ಸವ ಜೊತೆಯಾಗಿ ನಡೆಯುವುದು ಸಂಪ್ರದಾಯ ನೂರಾರು ವರ್ಷಗಳಿಂದ ನರಸಿಂಹದೇವರ ಮೂರ್ತಿಯನ್ನು ಸುಬ್ರಹ್ಮಣ್ಯದೇವರ ರಥದಲ್ಲಿಟ್ಟು ಮೆರವಣಿಗೆ ನಡೆಸುವ ಸಂಪ್ರದಾಯ ರೂಢಿಯಲ್ಲಿದೆ. ಕಳೆದ ವರ್ಷ ಈ ರೂಢಿಯ ಆಚರಣೆಗೆ ಆಕ್ಷೇಪ ಆರಂಭವಾದಾಗ, ಊರಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಿರಿಯ ಮಠಾಧೀಶರು ಸ್ಥಳೀಯ ನಾಗರೀಕರು ಸೇರಿ ಪರಿಣಾಮ ವಿಪರೀತಕ್ಕೆ ಹೋಗದಂತೆ ತಡೆದು ಉತ್ಸವ ನಡೆಸಿದರು.

ಈ ಬಾರಿ ಮತ್ತೆ ಸುಬ್ರಹ್ಮಣ್ಯ ದೇವರಿಗೂ ಮತ್ತು ಮಠದ ನರಸಿಂಹ ದೇವರಿಗೂ ಒಂದು ರಥದಲ್ಲಿ ಮೆರವಣಿಗೆ ಬಿಡುವುದಿಲ್ಲ ಎಂಬ ಮಾತು ಆಡಳಿತ ವರ್ಗದ ಮುಖ್ಯಸ್ಥದಿಂದ ಬಹಿರಂಗವಾಗಿ ಘೋಷಿಸಲ್ಪಟ್ಟಿದೆ. ಇದರಿಂದ ಮನನೊಂದ ಪೂಜ್ಯ ಪೇಜಾವರ ಮಠಾದೀಶರಾದ ವಿಶ್ವೇಶ್ವರ ತೀರ್ಥ ಶ್ರೀ ಪಾದಂಗಳವರು ತಾನು ನ್ಯಾಯಕ್ಕಾಗಿ ಶ್ರೀಮಠಕ್ಕೂ ದೇವಸ್ಥಾನಕ್ಕೂ ಮಧ್ಯೆ ಇದ್ದ ಸಂಪ್ರದಾಯಬದ್ಧ